1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.103/2017

ದಿಃ 31.08.2023

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-22 Pw-18

| | | |
|---|---|---|
| ಹೆಸರು | ಃ | ಮನು |
| ತಂದೆಯ ಹೆಸರು | ಃ | ಶ್ರೀನಿವಾಸ್ |
| ವಯಸ್ಸು | ಃ | 31 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸಸ್ಥಳ | ಃ | ಕಾಮಾಕ್ಷಿಪಾಳ್ಯ, ಬೆಂಗಳೂರು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನನಗೆ ಚಾಸಾ 21 ಮತ್ತು 23 ಯಾರು ಎಂಬುವುದು ಗೊತ್ತಿಲ್ಲ.

2.ಸನ್ 2016-17ರಲ್ಲಿ ನಾನು ನನ್ನ ಆಟೋ ತೆಗೆದುಕೊಂಕಡು ಹೋಗುತ್ತಿದ್ದಾಗ ಪೊಲೀಸರು ಮಾಗಡಿ ಪೊಲೀಸ್ ಠಾಣೆಯ ಆವರಣದಲ್ಲಿ ಒಂದು ದಸ್ತಾವೇಜಿನ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

3. ಸದರಿ ದಸ್ತಾವೇಜನ್ನು ಈಗ ನೋಡಿ ಗುರುತಿಸುತ್ತಿದ್ದು ಅದನ್ನು ಈಗಾಗಲೇ ನಿಪಿ 17 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ 17ಸಿ ಎಂದು ಗುರುತಿಸಲಾಯಿತು.

4.ನಿಪಿ 17 ರಲ್ಲಿ ಏನು ಬರೆದಿದೆ ಎಂಬುವುದು ನನಗೆ ಗೊತ್ತಿಲ್ಲ.

5.ಪೊಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ಟೆಂಪೋ ಟ್ರಾವೆಲರ್ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ಅಮಾನತ್ತಿನ ಪಂಚನಾಮೆಯನ್ನು ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

6. ಈಗ ನನಗೆ ಓದಿ ಹೇಳಿದ ನಿ.ಪಿ.17 ರಂತೆ ದಿಃ 03.11.2016 ರಂದು ಮಾಗಡಿ ಟೌನ್ ಪೊಲೀಸ್ ಠಾಣೆಯ ಆವರಣದಲ್ಲಿ ಚಾಸಾ 21 ಈತನು ಹಾಜರುಪಡಿಸಿದ್ದ ಒಂದು ಟೆಂಪೋ ಟ್ರಾವೆಲರ್ ನ್ನು ನನ್ನ ಸಮಕ್ಷಮದಲ್ಲಿ ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30 ರವರೆಗೆ ಒಂದು ಅಮಾನತ್ತಿನ ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡು ಅದರ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

7. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಆರ್‌ಕೆಎಸ್., ವಕೀಲರಿಂದ ಆರೋಪಿಗಳ ಪರವಾಗಿಃಏನು ಇಲ್ಲ ಎಂದು ತಿಳಿಸಿರುತ್ತಾರೆ.</u>ಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.